**ಒ.ಎಸ್.ನಂಬ್ರ: 390/2018 ಪಿ.ಡಬ್ಲ್ಯೂ : 1**

ದಿನಾಂಕ: 18-06-2022

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಮುಂದುವರಿದ ಪಾಟಿ ಸವಾಲು: ಶ್ರೀ ಎಂ.ಜೆ.ಎಸ್ ವಕೀಲರಿಂದ**

ನಿಪಿ-1 ಪಾಲು ಪಟ್ಟಿಯ ಪ್ರಕಾರ ದಾವಾ ಎ ಶೆಡ್ಯೂಲ್ ಆಸ್ತಿ ನನ್ನ ತಾಯಿ ಚಂದು ಹಾಂಡ್ತಿಯ ಸಂಪೂರ್ಣ ಹಕ್ಕಿಗೆ ಬಂದಿತ್ತು. ನನ್ನ ತಾಯಿ 2000 ನೇ ಇಸವಿಯಲ್ಲಿ ತೀರಿಹೋಗಿರುತ್ತಾರೆ. ನನ್ನ ತಾಯಿ ತೀರಿಹೋಗುವಾಗ ದಾವಾ ಆಸ್ತಿಗಳ ಆರ್ ಟಿ ಸಿ ಅವರ ಹೆಸರಲ್ಲಿ ದಾಖಲಾಗಿತ್ತು. ನನ್ನ ತಾಯಿ ತೀರಿಕೊಂಡ ಎಷ್ಟು ವರ್ಷಗಳ ನಂತರ 4 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಎ ಶೆಡ್ಯೂಲ್ ಆಸ್ತಿಯ ಪಹಣಿ ಪತ್ರಿಕೆ ಬದಲಾವಣೆಗೊಂಡಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಎಂ.ಆರ್ 73/2000-01 ರಂತೆ ದಾವಾ ಆಸ್ತಿಯ ಆರ್ ಟಿಸಿ 4 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈಗ ದಾವಾ ಆಸ್ತಿಯ ಆರ್ ಟಿ ಸಿ ಯಾರ ಹೆಸರಲ್ಲಿದೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಹಾಕಲು ವಕೀಲರಿಗೆ ಅನುಭವವನ್ನು ನಾನೇ ಕೊಟ್ಟಿರುತ್ತೇನೆ. ಈ ದಾವೆಯನ್ನು ಹಾಕುವಾಗ ದಾವಾ ಎ ಶೆಡ್ಯೂಲ್ ಆಸ್ತಿಯ ಪಹಣಿ ಪತ್ರಿಕೆ 4 ನೇ ಪ್ರತಿವಾದಿಯ ಹೆಸರಲ್ಲಿ ಇರುವ ಬಗ್ಗೆ ವಕೀಲರಿಗೆ ಅನುಭವ ನೀಡಿರುತ್ತೇನೆ. ದಾವಾ ಎ ಶೆಡ್ಯೂಲ್ ಆಸ್ತಿಯ ಆರ್ ಟಿ ಸಿ ಯು 4 ನೇ ಪ್ರತಿವಾದಿಗೆ ನನ್ನ ತಾಯಿ ವೀಲುನಾಮೆ ಬರೆದಿಟ್ಟ ಆಧಾರದ ಮೇಲೆ ದಾಖಲಾದ ಬಗ್ಗೆ ಕಂಡು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಇಂದಿಗೂ ಸಹಾ ನನಗೆ 4 ನೇ ಪ್ರತಿವಾದಿಯ ಹೆಸರಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಪತ್ರದ ಮತ್ತು ಮುಖ್ಯ ವಿಚಾರಣೆಯಲ್ಲಿ ನಾನು 4 ನೇ ಪ್ರತಿವಾದಿಯ ಹೆಸರು ವೀಲುನಾಮೆಯ ಪ್ರಕಾರ ದಾಖಲಾಗಿದೆ ಎಂದು ಹೇಳಿಲ್ಲ.

ಪ್ರತಿವಾದಿ 1 ರಿಂದ 3 ರವರು ಮತ್ತು 5 ರವರು ಈ ದಾವೆ ಹೂಡುವಂತೆ ತಿಳಿಸಿರುತ್ತಾರೆ ಅವರು ಸಹಾ ಈ ದಾವೆಯಲ್ಲಿ ತಮ್ಮ ಹಕ್ಕಿನ ಭಾಗವನ್ನು ಕೇಳುತ್ತಿದ್ದಾರೆ. ಈ ದಾವೆಯಲ್ಲಿ 4 ನೇ ಪ್ರತಿವಾದಿಯು ತನ್ನ ಲಿಖಿತ ತಕರಾರನ್ನು ಹಾಕಿದ್ದು ಅದರಲ್ಲಿ ಏನು ಹೇಳಿರುತ್ತಾರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿ 4 ರವರು ತನ್ನ ತಾಯಿ ಬರೆದಿಟ್ಟ ದಿ: 15-04-2000 ರ ವೀಲುನಾಮೆಯ ಬಗ್ಗೆ ತನ್ನ ಲಿಖಿತ ತಕರಾರಿನಲ್ಲಿ ಹೇಳಿಕೊಂಡಿದ್ದು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಹಾಗೂ ಆ ದಾಖಲೆಯನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ಆ ವೀಲುನಾಮೆಯ ಅಧಾರದ ಮೇಲೆ 2000 ನೇ ಇಸವಿಯಲ್ಲಿ ಹಕ್ಕು ಬದಲಾವಣೆ ಆಗಿದ್ದು ಸದ್ರಿ ಹಕ್ಕು ಬದಲಾವಣೆಯ ರದ್ದು ಕೋರಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ .

ಕಾಳ ಹಾಂಡ , ಗಿರಿಜ ಮತ್ತು ಕಾಯ ಹಾಂಡ್ತಿ ನನ್ನ ಸೋದರ ಮಾವ ಕುಪ್ಪ ಹಾಂಡನ ಮಕ್ಕಳು. ಸರೋಜ ಎಂಬವಳು ಕುಪ್ಪ ಹಾಂಡನ ಮೊಮ್ಮಗಳು ಇವರೆಲ್ಲರೂ ಸೇರಿ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಒಎಸ್ ನಂಬ್ರ 65/2002 ರಂತೆ ಈ ದಾವಾ ಆಸ್ತಿ ಅದರ ಉಳಿಕೆ ಭಾಗ ಇತರ ಆಸ್ತಿಗಳ ಕುರಿತು ಹಿಸೆ ವ್ಯಾಜ್ಯ ದಾಖಲಿಸಿರುತ್ತಾರೆಂದರೆ ಸರಿ. ಆ ದಾವೆಯಲ್ಲಿ ನಾನು ಹಾಜರಿರಲಿಲ್ಲ. ಸದ್ರಿ ದಾವೆಯನ್ನು ಕುಪ್ಪ ಹಾಂಡ , ಪದ್ದು ಹಾಂಡ್ತಿ, ತಿಮ್ಮ ಹಾಂಡ , ಅಕ್ಕಯ್ಯ ಹಾಂಡ್ತಿ, ಕುಷ್ಟ ಹಾಂಡ, ಮತ್ತು ಮಹಾಬಲ ಹಾಂಡರ ವಿರುದ್ಧ ಹೂಡಿದ್ದರು ಎಂದರೆ ಸರಿ . ಸದರಿ ದಾವೆಯಲ್ಲಿ ನಾನು 1 ರಿಂದ 5 ನೇ ಯವರ ಗಂಡ ಪ್ರತಿವಾದಿಯಾಗಿದ್ದರು ಎಂದರೆ ಸರಿ . ಸದರಿ ದಾವೆ ವಜಾಗೊಂಡ ನಂತರ ಆರ್ ಎ ನಂಬ್ರ 65/2005 ರಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ . ನಾನು ಮತ್ತು ಇತರ

ಪ್ರತಿವಾದಿಯರು ಆ ದಾವೆಯನ್ನು ವಿರೋಧಿಸಿರುತ್ತೇವೆಂದರೆ ಸರಿ . ಆ ದಾವೆಯಲ್ಲಿ ನಾವು ಬೇರೆ ಬೇರೆ ವಕೀಲರನ್ನು ನೇಮಿಸಿಕೊಂಡಿರುತ್ತೇವೆಂದರೆ ನಾನು ಅದಕ್ಕೆ ಹೋಗಿರಲಿಲ್ಲ ಆದರೆ ಅವರು ಬೇರೆ ಬೇರೆ ವಕೀಲರನ್ನು ನೇಮಿಸಿಕೊಂಡಿರುತ್ತಾರೆ. ಆ ದಾವೆಯಲ್ಲಿ ನನಗೆ 2 ನೇ ಪ್ರತಿವಾದಿ ಕುಷ್ಟ ಹಾಂಡ ವಕೀಲರನ್ನು ನೇಮಿಸಿಕೊಟ್ಟಿರುತ್ತಾರೆ. ಸದರಿ 2 ನೇ ಪ್ರತಿವಾದಿ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದು ಈಗ ನಿವೃತ್ತಿಯಾಗಿರುತ್ತಾರೆ. ಈ ದಿನ ಅವರು ನ್ಯಾಯಾಲಯಕ್ಕೆ ನನ್ನ ಜೊತೆ ಬಂದಿದ್ದು ನ್ಯಾಯಾಲಯದಲ್ಲಿ ಕುಳಿತಿರುತ್ತಾರೆ. ಮೇಲೆ ಹೇಳಿದ ದಾವೆಯಲ್ಲಿ 1, 2, ಮತ್ತು 4 ನೇ ಪ್ರತಿವಾದಿ ಒಬ್ಬರೇ ವಕೀಲರನ್ನು ನೇಮಿಸಿಕೊಂಡಿರುತ್ತಾರೆಂದರೆ ಸರಿ . ಸದ್ರಿ ದಾವೆಯಲ್ಲಿ ಶ್ರೀ ಸದಾನಂದ ಶೆಟ್ಟಿ ವಕೀಲರನ್ನು ನೇಮಕ ಮಾಡಿಕೊಂಡಿರುತ್ತೇನೆಂದರೆ ನನಗೆ ಗೊತ್ತಿಲ್ಲ. ನಾನು ಆರ್ ಎಂ ನಂಬ್ರ 56/2005 ರಲ್ಲಿ ನಾನು ಸ್ವತಃ ವಕೀಲರನ್ನು ನೇಮಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಸದ್ರಿ ದಾವೆಯಲ್ಲಿ ನಾನು ಸ್ವತಃ ವಕೀಲರನ್ನು ನೇಮಿಸಿಕೊಂಡು ವಿರೋಧ ಮಾಡಿರುತ್ತೇನೆಂದರೆ ಸರಿಯಲ್ಲ. ಸದ್ರಿ ದಾವೆಯಲ್ಲಿ 4 ನೇ ಪ್ರತಿವಾದಿ ಹೇಳಿಕೊಂಡಿರುವ ನನ್ನ ತಾಯಿ ಚಂದು ಹಾಂಡ್ತಿ ಬರೆದಿಟ್ಟಿದ್ದಾಳೆಂದು ಹೇಳುವ ವೀಲುನಾಮೆಯನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-1 ಎಂದು ನಿಶಾನೆಯಾಗಿ ಗುರುತಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಒಎಸ್ ನಂಬ್ರ 65/2002 ಮತ್ತು ಆರ್ ಎ ನಂಬರ 56/2005 ರಲ್ಲಿ ನಾನು ಪಕ್ಷಗಾರನಾಗಿರುವುದರಿಂದ ಹಾಗೂ ಆ ಪ್ರಕರಣದಲ್ಲಿ ನಾನು ಭಾಗಿಯಾಗಿ ಪ್ರಕರಣ ನಡೆಸಿರುವುದರಿಂದ ದಿಃ 15-04-2000 ದಂದು ನನ್ನ ತಾಯಿ ಚಂದು ಹಾಂಡ್ತಿ ಬರೆದಿಟ್ಟ ವೀಲುನಾಮೆ ನನ್ನ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಗಳಲ್ಲಿ ತೀರ್ಪಾಗಿವೆ ಎಂದು ಹೇಳುತ್ತಿದ್ದು ಆದರೆ ಅವುಗಳನ್ನು ನನಗೆ ಗುರುತಿಸಲಾಗುವುದಿಲ್ಲ. (ಸಾಕ್ಷಿಗೆ ಸದರಿ ತೀರ್ಪಿನ ಪ್ರತಿಗಳನ್ನು ತೋರಿಸಲಾಗಿರುತ್ತದೆ) . ಸದ್ರಿ ದಾವೆ ಮತ್ತು ಮೇಲ್ಮನವಿ ನಮ್ಮ ಪರವಾಗಿ ತೀರ್ಪಾಗಿದೆ ಎಂದು ಕಾಳ ಹಾಂಡ ತಿಳಿಸಿರುತ್ತಾರೆ. ನಾನು ಸದ್ರಿ ಕಾಳ ಹಾಂಡನ ಬಳಿ ಅವರು ದಾಖಲಿಸಿದ ದಾವೆ ಮತ್ತು ಮೇಲ್ಮನವಿ ಬಗ್ಗೆ ಕೇಳಿದಾಗ ಅವರು ಮೇಲಿನಂತೆ ತಿಳಿಸಿರುತ್ತಾರೆ. ಈಗ 7 ವರ್ಷಗಳ ಹಿಂದೆ ಕಾಳ ಹಾಂಡನ ಬಳಿ ಕೇಳಿರುತ್ತೇನೆ. ದಾವೆ ಮತ್ತು ಮೇಲ್ಮನವಿಯ ಬಗ್ಗೆ 4 ನೇ ಪ್ರತಿವಾದಿಯು ಈ ದಾವೆಯಲ್ಲಿ ತನ್ನ ಲಿಖಿತ ತಕರಾರಿನಲ್ಲಿ ಹೇಳಿಕೊಂಡಿದ್ದಾಳೆಂದರೆ ನನಗೆ ಗೊತ್ತಿಲ್ಲ. ಈ ಕೇಸಿನ ನನ್ನ ವಕೀಲರು ನನಗೆ ಮಾಹಿತಿ ನೀಡಿರುವುದಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**